ಮಾಯದಲ್ಲಿ ಅದರ ಡುಪ್ಲಿಕೇಟ್ ಕೀಲಿಯನ್ನು ಸಂಪಾದಿಸಿದ್ದ ಕಾರ್ಲಿತೋಗೆ ಯಾರದೋ ಮನೆಯಲ್ಲಿ ಕಳ್ಳನಂತೆ ಉಳಿಯುವುದು ಅಪರಾಧವಾಗಿ ಕಾಣಿಸುತ್ತಲೇ ಇರಲಿಲ್ಲ.

"ಖಾಲೀಬಿದ್ದ ಮನೆಯಲ್ಲಿ ಮಲಗಿದರೆ ಮನೆಯೇನು ಸವೆದು ಹೋಗುವುದಿಲ್ಲ. ನೀನೂ ಅವನಂತೆಯೇ ಒಬ್ಬ ಇಂಡಿಯನ್. ಅದೃಷ್ಟವಿದ್ದರೆ ಅದು ನಿನ್ನ ಮನೆಯೂ ಆಗಿರಬಹುದಿತ್ತು. ಮನೆಗಳಿಗೇನು? ಎಲ್ಲರನ್ನೂ ಸ್ವಾಗತಿಸುತ್ತವೆ. ಜನ ವಾಸ್ತವ್ಯವಿದ್ದರೆ ಮನೆಗೂ ಒಂದು ಕಳೆ. ನಿನ್ನ ಅದೃಷ್ಟ ಚೆನ್ನಾಗಿದೆ. ಈ ಮನೆಯಲ್ಲಿ ಸೋಫಾ, ಬೆಡ್ ಎಲ್ಲಾ ಇದೆ. ನಾನಿರುವ ಮನೆಯನ್ನೊಮ್ಮೆ ನೋಡಬೇಕು ನೀನು. ಥತ್, ದರ್ಬೇಸಿಗಳು ತಮ್ಮ ಕೈಲಾಗದಷ್ಟು ಸಾಲಮಾಡಿ ಮನೆಕೊಂಡು, ತೀರಿಸಲಾಗದೇ ಮನೆಬಿಟ್ಟು ಹೋಗುವಾಗ ಸಿಟ್ಟನ್ನು ಮನೆ ಮೇಲೆ ತೋರಿಸಿ ಹೋಗುತ್ತಾರೆ. ಬ್ಯಾಂಕಿನವರಿಗಂತೂ ಮನೆಗಿಂತ ಕೀಲಿಕೈ ಮುಖ್ಯ. ನೀರು ಮತ್ತು ಇಲೆಕ್ಟ್ರಿಕ್ ಪವರ್ ಕಳಚಿರುವ ಸಾಧ್ಯತೆಯೂ ಇದೆ. ರಿಪೇರಿ ಕೆಲಸ ಬರದ ನಿನ್ನಂಥವರಿಗೆ ಅಲ್ಲಿ ಒಂದು ರಾತ್ರಿ ಉಳಿಯುವುದೂ ಕಷ್ಟ. ಅವಕ್ಕೆ ಹೋಲಿಸಿದರೆ ಈ ಮನೆ ಸ್ವರ್ಗ. ಸುತ್ತಲಿನ ಜನರ ಪರಿಚಯ ಇಲ್ಲದಿದ್ದರೆ ನಾನೇ ಉಳಿಯುತ್ತಿದ್ದೆ."

ಮನೆ ನೋಡಿದ ಶಮಿಗೂ ಕಾರ್ಲಿತೋನ ಮಾತು ಸರಿಯೆನಿಸಿತ್ತು. ವಾಸ್ತವ್ಯದ ಎರಡೇ ರಾತ್ರಿಗಳಲ್ಲಿ, ಅಲ್ಲಿನ ನೀರವತೆ ಮನ ಗೆದ್ದುಬಿಟ್ಟಿತ್ತು. ಸುತ್ತಲಿನ ಜನರೂ ಅಷ್ಟೆ. ರಾತ್ರಿ ಬರುತ್ತಿದ್ದರು, ಬೆಳಕು ಮೂಡುವ ಮುಂಚೆ ಹೋಗುತ್ತಿದ್ದರು. ನೋಡಿದರೂ ಮಾತನಾಡಿಸುವವರಲ್ಲ. ಕೆಲವೊಮ್ಮೆ ಅವರೂ ತನ್ನ ಹಾಗೆ ಆಮಂತ್ರಣವಿಲ್ಲದ ಅತಿಥಿಗಳು ಅಥವಾ ಬ್ಯಾಂಕ್ ನೋಟೀಸಿಗೆ ಹೆದರಿ ರಾತ್ರಿ ಮಾತ್ರ ಬರುತ್ತಿದ್ದವರು ಎಂದು ಕಲ್ಪಿಸಿ ಖುಷಿಪಟ್ಟಿದ್ದುಂಟು. ಆ ಮನೆಯಲ್ಲಿ ತಾನು ಹಲವು ರಾತ್ರಿಗಳನ್ನು ಕಳೆದಿರುವ ಹಾಗೆ, ಆ ಕಾರಣದಿಂದ ಅದು ತನ್ನದೇ ಎನ್ನುವ ಹಾಗೆ ಕನಸುಗಳೂ ಬೀಳತೊಡಗಿದವು. ಬಿಟ್ಟು ಹೋಗುವ ಮಾತೇ ಇರಲಿಲ್ಲ. ಆದರೆ...

## 4

ಹಾಲಿನಲ್ಲಿ ಸದ್ದಾಯಿತು. ಬಂದವ ಹಾಕಿದ ಲೈಟ್ ಇಡೀ ಲಿವಿಂಗ್ ರೂಮನ್ನು ಬೆಳಕಿನಿಂದ ತುಂಬಿತು. ಮುಖ ನೋಡಬೇಕೆನ್ನುವಷ್ಟರಲ್ಲಿ ಆತನೇ ಬ್ರೀಫ್‌ಕೇಸ್ ಹಿಡಿದು ಬೆಡ್ ರೂಮಿನ ಕಡೆಗೆ ಬರತೊಡಗಿದಾಗ, ಎಂದಿನ ಲಯಕ್ಕೆ ಬಂದಿದ್ದ ಎದೆ ಮತ್ತೆ ಹೊಡೆದುಕೊಳ್ಳತೊಡಗಿತು. ತಪ್ಪಿಸಿಕೊಳ್ಳಲು ದಾರಿ ಇರಲಿಲ್ಲ. ಕೈಚೀಲ ಎತ್ತಿ ಬಾತ್‌ರೂಮಿನ ಕಡೆ ಹೊರಟವನು, ಕೊನೆ ಗಳಿಗೆಯಲ್ಲಿ ಕ್ಲಾಸೆಟ್‌ನ ಒಳಗಡೆ ಹೋಗಿ ಬಾಗಿಲು ಹಾಕಿಕೊಂಡ. ಅದೇ ಮನೆಯಲ್ಲಿ ರಾತ್ರಿಗಳನ್ನು ಕಳೆದಿದ್ದರೂ ಅಡಿಗೆ ಮನೆಗಿಂತಲೂ ಖಾಸಗಿಯಾದ ಕ್ಲಾಸೆಟ್ ಒಳಗೆ ಕಾಲಿಟ್ಟಿರಲಿಲ್ಲ. ಒಂದು ಕಾಲದಲ್ಲಿ ಎಷ್ಟೆಲ್ಲ ಗುಟ್ಟುಗಳು ಅಲ್ಲಿ ಮನೆಮಾಡಿದ್ದವೋ? ಈಗ ರಾಶಿ ರಾಶಿ ಖಾಲಿ ಹ್ಯಾಂಗರ್‌ಗಳು, ಹಳೆ ಟವೆಲ್‌ಗಳು, ಹಳೆಯ ವಸ್ತ್ರಗಳಷ್ಟೆ ಉಳಿದಿದ್ದವು. ಬೂಸ್ಟಿನ ವಾಸನೆ ಅಸಹನೀಯವಾಗಿತ್ತು. ಕ್ಲಾಸೆಟ್ ಬಾಗಿಲುಪಟ್ಟಿಗಳ ಮಧ್ಯೆ ಇದ್ದ ಬೆರಳು ತೂರುವಷ್ಟು ಜಾಗದಲ್ಲಿ ದೃಷ್ಟಿತೂರಿಸಿ ನಿಂತ.

ಬೆಡ್ ರೂಮಿನ ಒಳಗೆ ಬಂದವ ಸ್ವಿಚ್ ಒತ್ತಿದಾಗ ಝಗ್ಗೆಂದು ಚಿಮ್ಮಿದ ಬೆಳಕಿನಲ್ಲಿ ಕಂಡ ದೃಶ್ಯ ಶಮಿಯ ಬೆನ್ನಹುರಿಯಲ್ಲಿ ಮಿಂಚಿನ ಸೆಲೆಯನ್ನು ಹರಿಸಿತು. ದೃಷ್ಟಿ ಹರಿದಲ್ಲೆಲ್ಲಾ ಹೆಚ್ಚೂಕಡಿಮೆ ಶಮಿಯದೇ ತದ್ರೂಪು. ಒಂದಷ್ಟು ಬೊಜ್ಜು, ಸಮೃದ್ಧವಾಗಿ ಬಲಿತ ಕೆನ್ನೆಗಳ ಮೇಲೆ ಹೆಚ್ಚೆವೆ ಅನ್ನಬಹುದಾದ ಸುಕ್ಕುಗಳಿದ್ದರೂ ನುಣುಪಾದ ಕೆನ್ನೆ, ಎಡ ಹುಬ್ಬಿನ